# ವೈದ್ಯೆ ಎಂದವಳು ಬಣ್ಣಕ್ಕೆ ಮರುಳಾದೆ!

ಕಾವ್ಯಾ
ಉದಯದ 'ನಾಯಕಿ'ಯ
ಸೌಂದರ್ಯ



**◆ ಸೌಂದರ್ಯ ಪಾತ್ರವನ್ನ ಬಗ್ಗೆ ಹೇಳಿ...**

ತುಂಬ ಮುಗ್ಧ ಸ್ವಭಾವದಳು. ಅಪ್ಪ ಕುಡುಕ, ತಮ್ಮ ಇನ್ನೂ ಓದುತ್ತಿದ್ದಾನೆ. ಕುಟುಂಬದ ನಿರ್ವಹಣೆ ತನ್ನ ಮೇಲಿದೆ. ಮನೆಯ ಎಲ್ಲ ಖರ್ಚುವೆಚ್ಚಗಳನ್ನು ಆಕೆಯೇ ಭರಿಸುತ್ತಾಳೆ. ಮಾದರಿ ಮನೆ ಮಗಳಂತಹ ಗುಣ ಇರುವ ಈಕೆಯೇ ತನ್ನ ಕುಟುಂಬದ ಬೆನ್ನೆಲುಬು.

**◆ ನೀವು ನಟಿ ಆಗಿದ್ದು ಹೇಗೆ?**

ಮೊದಲಿನಿಂದ ಡಾನ್ಸ್ ಅಭ್ಯಾಸ ಮಾಡ್ತಾ ಇದ್ದೆ. ನನಗೆ ಡಾನ್ಸ್ ಬಗ್ಗೆ ಆಸಕ್ತಿ ಇತ್ತು. ನಮ್ಮ ಅಮ್ಮನಿಗೆ ನಾನು ಧಾರಾವಾಹಿಯಲ್ಲಿ ನಟಿಸಬೇಕು ಎನ್ನುವ ಬಯಕೆ ಇತ್ತು. ಅಮ್ಮನ ಸಲಹೆಯಂತೆ ಆಡಿಷನ್ ಕೊಡ್ತಾ ಇದ್ದೆ. ಅವರ ಒತ್ತಾಸೆಗೆ ನಾನು ಆಡಿಷನ್ ನೀಡಲು ಆರಂಭಿಸಿದೆ. 'ದುರ್ಗಾ'ದಲ್ಲಿ ಚಿಕ್ಕ ಪಾತ್ರವೊಂದು ನನ್ನ ಪಾಲಿಗೆ ದಕ್ಕಿತು. ಅದನ್ನೇ ಗಂಭೀರವಾಗಿ ತೆಗೆದುಕೊಂಡೆ. ನಂತರ 'ನೀಲಿ' 'ಮಹಾಕಾಳಿ'ಯಲ್ಲಿ ಅಭಿನಯಿಸಿದೆ. ನೀಲಿಯಿಂದ ನನಗೂ ಒಂದು ವ್ಯಕ್ತಿತ್ವ ದೊರೆತಂತೆ ಆಯಿತು.

**◆ ಶಾಲೆ ಮತ್ತು ಕಾಲೇಜು ದಿನಗಳು ಹೇಗಿದ್ದವು?**

ನಮ್ಮೂರು ಬೆಂಗಳೂರು ಸಮೀಪದ ನೆಲಮಂಗಲ. ಅಲ್ಲೇ ಪಿಯುಸಿ ತನಕ ಓದಿದೆ. ವೈದ್ಯೆ ಆಗಬೇಕು ಎನ್ನುವುದು ಆಗ ನನ್ನ ಕನಸಾಗಿತ್ತು. ಓದುವುದರಲ್ಲಿ, ಶಾಲೆಯಲ್ಲಿ ಮಾಡುವ ಎಲ್ಲಾ ಕಾರ್ಯಕ್ರಮಗಳಲ್ಲಿ ಮುಂದೆ ನಿಲ್ಲುತ್ತಿದ್ದೆ. ಹತ್ತನೇ ತರಗತಿಯ ತನಕ ನಾನು ಓದಿನಲ್ಲಿ ಮೊದಲಿಗಳು. ಪಿಯುಸಿಗೆ ಬಂದ ನಂತರ ಪಠ್ಯದ ಓದು ಕಡಿಮೆ ಆಯ್ತು. ಪಠ್ಯೇತರ ಚಟುವಟಿಕೆ ಹೆಚ್ಚಾಯಿತು. ಅದು ಅರಿವಾದ ಕೂಡಲೆ ನನ್ನ ಗುರಿ ವೈದ್ಯೆಯಿಂದ ಅಧ್ಯಾಪಕಿ ಆಗುವುದರತ್ತ ನೆಟ್ಟಿತು. ಡಾಕ್ಟರ್ ತುಂಬಾ ಸಂಕೀರ್ಣ ಕೆಲಸ ಎಂದು ನನಗೆ ಅನ್ನಿಸಿದ್ದೂ ಅದಕ್ಕೆ ಕಾರಣವಾಗಿತ್ತು. ಅದೇ ಕಾರಣಕ್ಕೆ ಬಿಎಸ್ಸಿಗೆ ಸೇರಿದೆ. ಅಷ್ಟರಲ್ಲಿ ನನಗೆ ಅಭಿನಯಕ್ಕೆ ಅವಕಾಶ ಸಿಕ್ಕಿತು. ಹಾಗಾಗಿ ಎಂಎಸ್ಸಿ ಮಾಡುವುದು ದೂರವೇ ಉಳಿಯಿತು. ಇಂತಹ ಅವಕಾಶಗಳು ಸಿಕ್ಕಾಗ ಮಾತ್ರ ಉಪಯೋಗಿಸಬೇಕು. ಬಿಎಸ್ಸಿ ತರಗತಿಯಲ್ಲೇ ನನಗೆ ಗೊಂದಲ ಶುರುವಾಗಿತ್ತು. ಏಕೆಂದರೆ ತರಗತಿಗಳು ಮಿಸ್ ಆಗುತ್ತಿದ್ದವು. ಏನು ಪಾಠ ಮಾಡುತ್ತಿದ್ದಾರೆ ಎನ್ನುವುದೇ ಗೊತ್ತಾಗುತ್ತಿರಲಿಲ್ಲ. ಅಲ್ಲಿಗೆ ಓದನ್ನು ನಿಲ್ಲಿಸಿ ಪೂರ್ಣಾವಧಿ ಕಲಾವಿದೆ ಆಗುವುದೇ ಒಳಿತೆಂದು ನಿರ್ಧರಿಸಿದೆ. ಹೀಗಾಗಿ ಎರಡೂ ಆಗದೆ ನಾನು ಅಂದುಕೊಳ್ಳದ ಕ್ಷೇತ್ರದಲ್ಲಿ ವೃತ್ತಿ ಆರಂಭಿಸಿದ್ದೇನೆ. ಬಾಲ್ಯದಲ್ಲಿ ನನಗಿದ್ದ ಕ್ರೀಡೆ, ಸಾಂಸ್ಕೃತಿಕ ಆಸಕ್ತಿ ಇಲ್ಲಿಗೆ ಹಿಡಿದು ತಂದಿದೆ. ಮುಂದೆ ಕಾಲಾವಕಾಶ ಸಿಕ್ಕರೆ ಎಂಎಸ್ಸಿ ಮಾಡುವೆ. ಈಗ ಸದ್ಯ ಇದರಲ್ಲಿಯೇ ಬಿಜಿಯಾಗಿರುವುದರಿಂದ ಇದನ್ನೇ ಮುಂದುವರಿಸೋಣ ಎನ್ನುವುದು ಸದ್ಯದ ಯೋಚನೆ.

**◆ ನಟಿಯಾದ ನಂತರ ಸಮಾಜದಲ್ಲಿ ನಿಮ್ಮನ್ನು ಯಾವ ರೀತಿ ಕಂಡಿದ್ದೀರಿ?**

ನಾನು ಸಾಮಾಜಿಕ ಮಾಧ್ಯಮಗಳಲ್ಲಿ ಅಷ್ಟಕ್ಕೆ ಅಷ್ಟೆ. ಫೇಸ್‌ಬುಕ್ ಸೇರಿದಂತೆ ಯಾವುದರಲ್ಲೂ ನಾನಿಲ್ಲ. ಹಾಗಾಗಿ ಅಲ್ಲಿ ಸ್ನೇಹಿತರೂ ಇಲ್ಲ, ಫಾಲೋವರ್ಸ್ ಕೂಡ ಇಲ್ಲ. ಹಾಗಾಗಿ ಆ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಮೇಕಪ್ ತೆಗೆದರೆ ನಾನು ಯಾರು ಎಂದು ಗೊತ್ತಾಗುವುದೇ ಇಲ್ಲ. ಹಾಗಾಗಿ ಅಷ್ಟು ಸುಲಭಕ್ಕೆ ನನ್ನ ಗುರ್ತು ಸಿಗಲ್ಲ. ಈ ಬಣ್ಣದ ವೃತ್ತಿ ಬದುಕಿಗೆ ಮೂರು ವರ್ಷ ಆಯ್ತು. ಅದರ ಅನುಭವ ಹೇಳುವುದಾದರೆ ನೀಲಿ ನಟಿಸುವಾಗ ಮಾಧ್ಯಮಿಕ ಶಾಲೆ ಮಕ್ಕಳ ಅಭಿಮಾನ ಬಳಗ ಬೆಳೆಯಿತು. ಅದು ಮಗುವಿನ ಪಾತ್ರ– ಅದರಲ್ಲಿ ಬರುವ ಬೊಂಬೆ ಮಕ್ಕಳಿಗೆ ಇಷ್ಟ ಆಗ್ತಾ ಇತ್ತು. ಅದನ್ನು ಬಿಟ್ಟರೆ ಹಿರಿಯರು ಮತ್ತು ಗೃಹಿಣಿಯರ ಮೆಚ್ಚುಗೆ ಸಿಕ್ಕಿದೆ. ಯುವಕರು ಅಷ್ಟಕ್ಕಷ್ಟೆ. ಸಾಮಾಜಿಕವಾಗಿ ಜನ ಸಂಪರ್ಕ ಜೀವನ ಪಾಠವನ್ನು ಕಲಿಸುತ್ತದೆ. ಜನರ ಒಳ್ಳೆತನ ಅವರ ಆದರ್ಶಗಳು ಅನುಸರಿಸಲು ಸಹಾಯ ಮಾಡುತ್ತವೆ. ಮನುಷ್ಯರ ದುಷ್ಟತನಗಳೂ ಕೂಡ ಏನನ್ನು ಮಾಡಬಾರದು ಹೇಗಿರಬಾರದು ಎನ್ನುವ ಮಾದರಿಯನ್ನು ಹೇಳಿಕೊಡುತ್ತವೆ.

■ ರಾಘವೇಂದ್ರ ಕೆ.